ಶ್ರೀ ಮಲ್ಲಿಕಾರ್ಜುನ ಸಿದ್ರಾಮಪ್ಪ ಖೂಬ (ಬಸವಕಲ್ಯಾಣ):-

1054(522) ಮಾನ್ಯ ಜಲಸಂಪನ್ಮೂಲ ಸಚಿವರು ಈ ಕೆಳಕಂಡ ವಿಷಯಗಳನ್ನು ತಿಳಿಸುವರೆ:-

(ಅ) ಕಾರಂಜಾ, ಚುಳಕಿನಾಲಾ ಮತ್ತು ಮುಲ್ಲಾಮಾರಿ ನೀರಾವರಿ ಯೋಜನೆಗಳ ಅನುಷ್ಠಾನಕ್ಕಾಗಿ ಎಷ್ಟು ಎಕರೆ ರೈತರ ಭೂಮಿಯನ್ನು ಸ್ವಾಧೀನ ಪಡಿಸಿಕೊಳ್ಳಲಾಗಿದೆ ಹಾಗೂ ಎಷ್ಟು ಎಕರೆ ಭೂಮಿಯು ಮುಳುಗಡೆಯಾಗಿದೆ;

(ಆ) ಮೇಲ್ಕಂಡ ಯೋಜನೆಗಳಿಂದ ಎಷ್ಟು ಜನರು ಭೂಮಿ, ಮನೆ ಮಠಗಳನ್ನು ಕಳೆದುಕೊಂಡು ನಿರ್ಗತಿಕರಾಗಿದ್ದಾರೆ; (ವಿಧಾನ ಸಭಾ ಕ್ಷೇತ್ರವಾರು ವಿವರಗಳನ್ನು ಒದಗಿಸುವುದು)

(ಇ) ಇವರುಗಳಿಗೆ ಎಷ್ಟು ಮೊತ್ತದ ಪರಿಹಾರವನ್ನು ನಿಗದಿ ಗೊಳಿಸಲಾಗಿದೆ ಹಾಗೂ ಯಾವ ಮಾನದಂಡದ ಮೇಲೆ ಈ ಪರಿಹಾರವನ್ನು ನಿಗದಿಪಡಿಸಲಾಗಿದೆ;

(ಈ) ಈ ಪೈಕಿ ಎಷ್ಟು ಪರಿಹಾರವನ್ನು ಇಲ್ಲಿಯವರೆವಿಗೆ ನೀಡಲಾಗಿದೆ; ಇನ್ನೂ ಎಷ್ಟು ಬಾಕಿ ಇದೆ; (ಕ್ಷೇತ್ರವಾರು ವಿವರಗಳನ್ನು ಒದಗಿಸುವುದು)

(ಉ) ಈ ಯೋಜನೆಗಳಿಂದ ನಿರ್ಗತಿಕರಾದ ಜನರಿಗೆ ಯಾವ ಯಾವ ಪುನರ್‌ವಸತಿ ಯೋಜನೆಗಳನ್ನು ಹಾಗೂ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಲಾಗಿದೆ; ಈ ಕೆಲಸ ಪೂರ್ಣಗೊಂಡಿದೆಯೇ;

(ಊ) ಇನ್ನೂ ಎಷ್ಟು ಕಲ್ಪಿಸಬೇಕಾಗಿದೆ; ಇದನ್ನು ಇನ್ನೂ ಎಷ್ಟು ಅವಧಿಯೊಳಗೆ ಕಲ್ಪಿಸಲಾಗುವುದು; ಈ ವಿಳಂಬಕ್ಕೆ ಕಾರಣಗಳೇನು?

ಶ್ರೀ ಕೆ.ಎಸ್.ಈಶ್ವರಪ್ಪ (ಜಲಸಂಪನ್ಮೂಲ ಸಚಿವರು):-

(ಅ)

ಕಾರಂಜಾ ಯೋಜನೆ		ಚುಳಕಿನಾಲಾ ಯೋಜನೆ		ಮುಲ್ಲಾಮಾರಿ ಯೋಜನೆ	
ಒಟ್ಟು ಸ್ವಾಧೀನ ಪಡಿಸಿಕೊಂಡ ರೈತರ ಜಮೀನು (ಎಕರೆಗಳಲ್ಲಿ)	ಮುಳುಗಡೆಯಾದ ಜಮೀನು (ಎಕರೆಗಳಲ್ಲಿ)	ಒಟ್ಟು ಸ್ವಾಧೀನ ಪಡಿಸಿಕೊಂಡ ರೈತರ ಜಮೀನು (ಎಕರೆಗಳಲ್ಲಿ)	ಮುಳುಗಡೆಯಾದ ಜಮೀನು (ಎಕರೆಗಳಲ್ಲಿ)	ಒಟ್ಟು ಸ್ವಾಧೀನ ಪಡಿಸಿಕೊಂಡ ರೈತರ ಜಮೀನು (ಎಕರೆಗಳಲ್ಲಿ)	ಮುಳುಗಡೆಯಾದ ಜಮೀನು (ಎಕರೆಗಳಲ್ಲಿ)
19425-00	14283	2153-00	1712-00	1296-00	717-00

(ಆ)

ಕಾರಂಜಾ ಯೋಜನೆ		ಚುಳಕಿನಾಲಾ		ಮುಲ್ಲಾಮಾರಿ	
ವಿಧಾನ ಸಭಾ ಕ್ಷೇತ್ರ	ಭೂಮಿ, ಮನೆ, ಮಠ ಕಳೆದುಕೊಂಡ ಜನರು	ವಿಧಾನ ಸಭಾ ಕ್ಷೇತ್ರ	ಭೂಮಿ, ಮನೆ, ಮಠ ಕಳೆದುಕೊಂಡ ಜನರು	ವಿಧಾನ ಸಭಾ ಕ್ಷೇತ್ರ	ಭೂಮಿ, ಮನೆ, ಮಠ ಕಳೆದುಕೊಂಡ ಜನರು
1) ಬೀದರ	3052	ಬಸವಕಲ್ಯಾಣ	2495	ಬಸವಕಲ್ಯಾಣ	3105
2) ಹುಮನಾಬಾದ	2046				
3) ಹುಲಸೂರ	2932				
4) ಭಾಲ್ಕಿ	1676				

(ಇ) ವಿಶೇಷ ಭೂಸ್ವಾಧೀನಾಧಿಕಾರಿ, ಕಾರಂಜಾ ಯೋಜನೆ ಬೀದರವರು ಪರಿಹಾರ ನಿಗದಿಪಡಿಸಿರುತ್ತಾರೆ ಹಾಗು 4(1) ಪ್ರಕಟಣೆ ಪ್ರಕಟಿಸಿದ ದಿನಾಂಕಕ್ಕಿಂತಲೂ 3 ವರ್ಷ ಅವಧಿಯ ಭೂ ಮಾರಾಟದ ಸರಾಸರಿ ಬೆಲೆಯನ್ನು ಆಧರಿಸಿ. ಭೂಸ್ವಾಧನಕ್ಕೊಳಪಟ್ಟ ಜಮೀನಿನ ಬೆಲೆ ನಿಗದಿಪಡಿಸಲಾಗಿದೆ.

ಕಾರಂಜಾ ಯೋಜನೆ			ಚುಳಕಿನಾಲಾ			ಮುಲ್ಲಾಮಾರಿ		
ಪರಿಹಾರ ಹಂಚಿಕೆ ಮಾಡಿದ್ದು ರೂ. ಲಕ್ಷಗಳಲ್ಲಿ	ಇನ್ನೂ ಬಾಕಿ ಉಳಿದಿದ್ದು ರೂ. ಲಕ್ಷಗಳಲ್ಲಿ	ವಿಧಾನ ಸಭಾ ಕ್ಷೇತ್ರ	ಪರಿಹಾರ ಹಂಚಿಕೆ ಮಾಡಿದ್ದು ರೂ. ಲಕ್ಷಗಳಲ್ಲಿ	ಇನ್ನೂ ಬಾಕಿ ಉಳಿದಿದ್ದು ರೂ. ಲಕ್ಷಗಳಲ್ಲಿ	ವಿಧಾನ ಸಭಾ ಕ್ಷೇತ್ರ	ಪರಿಹಾರ ಹಂಚಿಕೆ ಮಾಡಿದ್ದು ರೂ. ಲಕ್ಷಗಳಲ್ಲಿ	ಇನ್ನೂ ಬಾಕಿ ಉಳಿದಿದ್ದು ರೂ. ಲಕ್ಷಗಳಲ್ಲಿ	ವಿಧಾನ ಸಭಾ ಕ್ಷೇತ್ರ
4377.00	417.00	ಹುಮನಾಬಾದ ಹೂಲಸೂರ ಬೀದರ	651.68	68.00	ಬಸವಕಲ್ಯಾಣ	186.62	1.00	ಬಸವಕಲ್ಯಾಣ

1) **<u>ಕಾರಂಜಾ</u>** ಯೋಜನೆ ಅಡಿಯಲ್ಲಿ ನಿರ್ವಸತಿಕರಾದವರಿಗೆ 8 ಪುನರವಸತಿ ಕೇಂದ್ರಗಳನ್ನು 1) ಸಂಗೋಳಗಿ (2) ನೆಲವಾಡ (3) ಸಿಂದಬಂದಗಿ (4) ಅತಿವಾಳ (5) ಡಾಕುಳಗಿ (6) ಕಮಾಲಪೂರ (7) ಹಜ್ಜರತಿ (8) ರಂಜೋಳಖೇಣಿಯಲ್ಲಿ ನಿರ್ಮಿಸಲಾಗಿದೆ. ಇವುಗಳಲ್ಲಿ ಮೂಲಭೂತ ಸೌಕರ್ಯಗಳಾದ ನೀರು ಸರಬರಾಜು, ವಿದ್ಯುತ್ ಸರಬರಾಜು, ಆಂತರಿಕ ರಸ್ತೆ, ಸಾರ್ವಜನಿಕ ಕಟ್ಟಡಗಳಾದ ಶಾಲೆ, ಸಮುದಾಯ ಭವನ, ಧಾರ್ಮಿಕ ಪೂಜಾ ಮಂದಿರಗಳು ಇತ್ಯಾದಿ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಲಾಗಿದೆ ಹಾಗೂ ಪೂರ್ಣಗೊಂಡಿವೆ. ಆದರೆ ಕೇವಲ ಒಂದು ಪುನರವಸತಿ ಕೇಂದ್ರವಾದ ರಂಜೋಳಖೇಣಿ ಮೂಲಭೂತ ಸೌಕರ್ಯಗಳನ್ನು ಪೂರ್ಣಗೊಳಿಸುವ ಕಾರ್ಯ ಪ್ರಗತಿಯಲ್ಲಿದೆ.

2) ಚುಳಕಿನಾಲಾ:– ಚುಳಕಿನಾಲಾ ಯೋಜನೆ ಅಡಿಯಲ್ಲಿ ನಿರ್ವಸತಿಕರಾದವರಿಗೆ 2 ಪುನರ್‌ವಸತಿ ಕೇಂದ್ರಗಳನ್ನು ನಿರ್ಮಿಲಸಾಗಿದೆ. (1) ಮುಸ್ತಾಪುರ (2) ಧನ್ನೂರ (ಕೆ)ರಲ್ಲಿ

ನಿರ್ಮಿಸಲಾಗಿದೆ. ಇವುಗಳಿಗೆ ಮೂಲಭೂತ ಸೌಕರ್ಯಗಳಾದ ನೀರು ಸರಬರಾಜು, ವಿದ್ಯುತ್ ಸರಬರಾಜು, ಆಂತರಿಕ ರಸ್ತೆ, ಸಾರ್ವಜನಿಕ ಕಟ್ಟಡಗಳಾದ ಶಾಲೆ, ಸಮುದಾಯ ಭವನ, ಧಾರ್ಮಿಕ ಪೂಜಾ ಮಂದಿರಗಳು ಇತ್ಯಾದಿ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಲಾಗಿದೆ ಹಾಗೂ ಪೂರ್ಣಗೊಂಡಿವೆ. ಮುಸ್ತಾಪೂರ ಪುನರ್‌ವಸತಿ ಕೇಂದ್ರವನ್ನು ಜಿಲ್ಲಾ ಪಂಚಾಯತ್‌ಗೆ ಹಸ್ತಾಂತರಿಸಲಾಗಿದೆ ಹಾಗೂ ಧನ್ನೂರು(ಕೆ) ಪುನರವಸತಿ ಕೇಂದ್ರವನ್ನು ಹಸ್ತಾಂತರಿಸುವ ಸಲುವಾಗಿ ತಹಸಿಲ್ದಾರರು ಬಸವಕಲ್ಯಾಣ ಇವರಿಗೆ ನಿರಾಶ್ರಿತರ ಪಟ್ಟಿಯನ್ನು ಕಳುಹಿಸಲಾಗಿದೆ.

3) **ಮುಲ್ಲಾಮಾರಿ:–** ಮುಲ್ಲಾಮಾರಿ ಯೋಜನೆ ಅಡಿಯಲ್ಲಿ ನಿರ್ವಸತಿಕರಾದವರಿಗೆ 2 ಪುನರ್‌ವಸತಿ ಕೇಂದ್ರಗಳನ್ನು (1) ಶರಣನಗರ (2) ಮಶಾಲಥಾಂಡಾ ರಲ್ಲಿ ನಿರ್ಮಿಸಲಾಗಿದೆ. ಇವುಗಳಲ್ಲಿ ಮೂಲಭೂತ ಸೌಯರ್ಕಗಳಾದ ನೀರು ಸರಬರಾಜು, ವಿದ್ಯುತ್ ಸರಬರಾಜು, ಆಂತರಿಕ ರಸ್ತೆ, ಸಾರ್ವಜನಿಕ ಕಟ್ಟಡಗಳಾದ ಶಾಲೆ, ಸಮುದಾಯ ಭವನ, ಧಾರ್ಮಿಕ ಪೂಜಾ ಮಂದಿರಗಳು ಇತ್ಯಾದಿ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಲಾಗಿದೆ. ಹಾಗೂ ಪೂರ್ಣಗೊಂಡಿವೆ.

1) **ಕಾರಂಜಾ:–** ಕಾರಂಜಾ ಯೋಜನೆಯಲ್ಲಿ ರಂಜೋಳಖೇಣಿ ಪುನರ್‌ವಸತಿ ಕೇಂದ್ರದಲ್ಲಿ ಮೂಲಭೂತ ಸೌಕರ್ಯಗಳನ್ನು ಪೂರ್ಣಗೊಳಿಸುವ ಕಾರ್ಯ ಪ್ರಗತಿಯಲ್ಲಿದೆ ರಂಜೋಳಖೇಣಿ ಭಾಗಶಃ ಮುಳುಗಡಯಾಗಿರುತ್ತದೆ. ಇದರ ಪ್ರಸ್ತಾವನೆಯನ್ನು ನಂತರದಲ್ಲಿ ಗುರುತಿಸಿರುವುದರಿಂದ ಹಾಗೂ ಭೂ ವಿವಾದ ಕಾರಣಗಳಿಂದಾಗಿ ವಿಳಂಬವಾಗಿರುತ್ತದೆ. ಇದನ್ನು ಡಿಸೆಂಬರ್ 2007 ಅಂತ್ಯದವರೆಗೆ ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ.

2) **ಚುಳುಕಿನಾಲಾ:–** ಯಾವುದು ಇರುವುದಿಲ್ಲ.

3) **ಮುಲ್ಲಾಮಾರಿ:–** ಯಾವುದೂ ಇರುವುದಿಲ್ಲ.

ಶ್ರೀ ಮಲ್ಲಿಕಾರ್ಜುನ ಸಿದ್ರಾಮಪ್ಪ ಖೂಬಾ (ಬಸವ ಕಲ್ಯಾಣ):–

1055(743) ಮಾನ್ಯ ವಸತಿ ಸಚಿವರು ಈ ಕೆಳಕಂಡ ವಿಷಯಗಳನ್ನು ತಿಳಿಸುವರೆ:–

1) ಪ್ರಸಕ್ತ ಸಾಲಿನಲ್ಲಿ ಗೃಹ ಮಂಡಳಿ ವತಿಯಿಂದ ರಾಜ್ಯಾದ್ಯಂತ ಕೇಂದ್ರ ಹಾಗೂ ರಾಜ್ಯ ಸರ್ಕಾರದ ಯೋಜನೆಯಡಿಯಲ್ಲಿ ಎಷ್ಟು ಮನೆಗಳನ್ನು ನಿರ್ಮಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆ; ಇದಕ್ಕೆ ವೆಚ್ಚ ಮಾಡಲಿರುವ ಹಣದ ಮೊತ್ತವೆಷ್ಟು; ಕೇಂದ್ರದಿಂದ ಇದಕ್ಕಾಗಿ ರಾಜ್ಯಕ್ಕೆ ಬಂದಿರುವ ಹಣದ ಮೊತ್ತವೆಷ್ಟು;